**50ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು**

**ಸಿ.ಸಿ. ನಂ.4317/2019**

ಪಿ.ಡಬ್ಲೂ -2 ಸಿ.ಡಬ್ಲೂ-9

ಸಾಕ್ಷಿದಾರರ ಹೆಸರು : ಕಿರಣಕುಮಾರ

ತಂದೆ ಹೆಸರು : ನಾಗಶೆಟ್ಟಿ

ವಯಸ್ಸು : 40ವರ್ಷ

ಕೆಲಸ : ಮುಖ್ಯ ಪೇದೆ

ವಾಸ : ಮಾಗಡಿ ರಸ್ತೆ ಪೊಲೀಸ್ ಠಾಣೆ

**ಸಾಕ್ಷಿಯನ್ನು ದಿನಾಂಕಃ 26.05.2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ ಹಿ.ಸ.ಸ.ಅ. ರವರಿಂದಃ**

ದಿಃ ಜನವರಿ 2016 ರಿಂದ ಸೆಪ್ಟೆಂಬರ್ 2020 ರವರೆಗೆ ನಾನು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 24.11.2018 ರಂದು ನಮ್ಮ ಠಾಣೆಯ ಪಿ ಎಸ್ ಐ ರವರಾದ ಚಾ.ಸಾ.11 ರವರು ನನಗೂ, ಚಾಸಾ-8 ರವರಿಗೆ ಈ ಪ್ರಕರಣದಲ್ಲಿ ಆರೋಪಿಗಳನ್ನು ಪತ್ತೆ ಮಾಡಿ ಕರೆತರಲು ಕರ್ತವ್ಯಕ್ಕೆ ನೇಮಿಸಿದ್ದು. ಅದರಂತೆ ನಾವು ಬಾತ್ಮೀದಾರರನ್ನು ಸಂಪರ್ಕ ಮಾಡಿ ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ಹೆಗ್ಗನಹಳ್ಳಿ ಕ್ರಾಸ್ ರಾಮದೇವ ಜ್ಯುವೇಲರಿ ಅಂಗಡಿ ಬಳಿ 4 ಜನ ಆಸಾಮಿಗಳು ನಿಂತಿದ್ದು. ಬಾತ್ಮೀದಾರರು ಪ್ರಕರಣದ ಆರೋಪಿಗಳು ಇವರೇ ಎಂದು ತಿಳಿಸಿದ ಮೇರೆಗೆ ನಾವು ಅವರ ಹತ್ತಿರ ಹೋಗುತ್ತಿದ್ದಂತೆ ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿರುತ್ತಾರೆ. ನಾವು ಬೆನ್ನಟ್ಟಿ ಇಬ್ಬರು ಆಸಾಮಿಗಳನ್ನು ಹಿಡಿದುಕೊಂಡಿದ್ದು ಹೆಸರು ವಿಳಾಸ ಕೇಳಲಾಗಿ ಈ

ಕೇಸಿನ 1 ಮತ್ತು 2 ನೇ ಆರೋಪಿಗಳು ಆಗಿದ್ದು. ಓಡಿ ಹೋದವನ ಬಗ್ಗೆ ಹೆಸರು ವಿಳಾಸ ಕೇಳಲಾಗಿ ಅವರು ತುಮಕೂರಿನ ಲೋಕೇಶ ಮತ್ತು ಸುನೀಲ್ ಎಂದು ತಿಳಿಸಿರುತ್ತಾರೆ. ನಂತರ ಅವರನ್ನು ವಿಚಾರಣೆ ಮಾಡಲಾಗಿ ನಂತರ ಸಮಂಜಸ ಉತ್ತರ ನೀಡದೇ ಇದ್ದ ಕಾರಣ ಅವರು ಈ ಪ್ರಕರಣದ ಆಸಾಮಿಗಳು ಇರುವ ಕಾರಣ ಅವರನ್ನು ಚಾ.ಸಾ.11 ರವರ ಮುಂದೆ ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ಹಾಜರು ಪಡಿಸಿರುತ್ತೇವೆ. ಚಾ.ಸಾ.8 ರವರು ಈ ಬಗ್ಗೆ ವರದಿ ನೀಡಿರುತ್ತಾರೆ. ಸದರಿ ವರದಿಯನ್ನು **ನಿಪಿ-3** ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ.

ಅದೇ ರೀತಿ ದಿ.28.11.2018 ರಂದು ಚಾ.ಸಾ.11 ರವರು ನನಗೂ, ಚಾಸಾ-8 ರವರಿಗೆ ಈ ಪ್ರಕರಣದಲ್ಲಿ ಉಳಿದ ಆರೋಪಿಗಳನ್ನು ಪತ್ತೆ ಮಾಡಿ ಕರೆತರಲು ಕರ್ತವ್ಯಕ್ಕೆ ನೇಮಿಸಿದ್ದು. ಅದರಂತೆ ಅದರಂತೆ ನಾವು ಬಾತ್ಮೀದಾರರನ್ನು ಸಂಪರ್ಕ ಮಾಡಿ ರಾತ್ರಿ 10.00 ಗಂಟೆ ಸಮಯದಲ್ಲಿ ಸುಂಕದಕಟ್ಟೆ ಅಂಬಯ್ಯ ಜ್ಯುವೇಲರಿ ಅಂಗಡಿ ಬಳಿ ಇಬ್ಬರು ಆಸಾಮಿಗಳು ಕೈಯಲ್ಲಿ ಬ್ಯಾಗ್ ನ್ನು ಹಿಡಿದು ನಿಂತಿದ್ದು. ಬಾತ್ಮೀದಾರರು ಪ್ರಕರಣದ ಆರೋಪಿಗಳು ಇವರೇ ಎಂದು ತಿಳಿಸಿದ ಮೇರೆಗೆ ನಾವು ಅವರ ಹತ್ತಿರ ಹೋಗುತ್ತಿದ್ದಂತೆ ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿರುತ್ತಾರೆ. ನಾವು ಬೆನ್ನಟ್ಟಿ ಇಬ್ಬರು ಆಸಾಮಿಗಳನ್ನು ಹಿಡಿದುಕೊಂಡಿದ್ದು ಹೆಸರು ವಿಳಾಸ ಕೇಳಲಾಗಿ ಈ ಕೇಸಿನ ಲೋಕೇಶ್ ಮತ್ತು ಸುನೀಲ್ ಎಂದು ತಿಳಿಸಿರುತ್ತಾರೆ. ಅವರ ಕೈಯಲ್ಲಿದ್ದ ಬ್ಯಾಗ್ ನ್ನು ಪರಿಶೀಲಿಸಿದಾಗ ಬ್ಯಾಗ್ ನಲ್ಲಿ ಬೆಳ್ಳಿಯ ಒಡವೆಗಳು ಇದ್ದು. ಅವುಗಳ ಬಗ್ಗೆ ವಿಚಾರ ಮಾಡಲಾಗಿ ಅವರು ಈ ಹಿಂದೆ

ಕಾಮಾಕ್ಷಿಪಾಳ್ಯ ಠಾಣಾ ಸರಹದ್ದಿನಲ್ಲಿ ಕಳ್ಳತನ ಮಾಡಿರುವುದಾಗಿ ಹಾಗೂ ಅವುಗಳನ್ನು ಮಾರಾಟ ಮಾಡಲು ಬಂದಿರುವುದಾಗಿ ತಿಳಿಸಿದ್ದು. ನಂತರ ಅವರನ್ನು ಮತ್ತು ಒಡವೆಗಳ ಸಮೇತ ಚಾ.ಸಾ.11 ರವರ ಮುಂದೆ ರಾತ್ರಿ 10.30 ಗಂಟೆ ಸಮಯದಲ್ಲಿ ಹಾಜರು ಪಡಿಸಿರುತ್ತೇವೆ. ಚಾ.ಸಾ.8 ರವರು ಈ ಬಗ್ಗೆ ವರದಿ ನೀಡಿರುತ್ತಾರೆ. ಸದರಿ ವರದಿಯನ್ನು **ನಿಪಿ-4** ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟೀ ಸವಾಲು ಆರೋಪಿಯಿಂದಃ**

1. ನಮಗೆ ಪಿ ಎಸ್ ಐ ರವರು ಮೌಖಿಕವಾಗಿ ಆದೇಶ ಮಾಡಿರುತ್ತಾರೆ. ನಮಗೆ ಆರೋಪಿಗಳ ಭಾವಚಿತ್ರ ನೀಡಿರಲಿಲ್ಲ. ಆ ದಿನ ಪತ್ತೆಗಾಗಿ ಹೋದಾಗ ನಾವು ಠಾಣೆಯಲ್ಲಿ ಆ ಬಗ್ಗೆ ನಮೂದಿಸಿದ ಬಗ್ಗೆ ಗೊತ್ತಿಲ್ಲ. ಮೇಲೆ ಹೇಳಿದ 2 ಬಂಗಾರ ಅಂಗಡಿ ಮುಂದೆ ಸಿಸಿಟಿವಿ ಕ್ಯಾಮೆರಾಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಆ ದಿನ ನಾವು ಯಾವುದೇ ಆರೋಪಿಗಳನ್ನು ಹಿಡಿದುಕೊಂಡಿಲ್ಲ ಹಾಗೂ ಆರೋಪಿಗಳಿಗೂ ಮತ್ತು ಪ್ರಕರಣಕ್ಕೂ ಸಂಬಂಧ ಇಲ್ಲ, ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

**ಓ ಹೇ ಕೇ ಸ ಇ ಒ**

**50ನೇ ಅ. ಮು. ಮ. ದಂ. ನ್ಯಾ**